# ಸ್ಥಳೀಯ ಜ್ಞಾನದ ಮೂಲಕ ಕಲಿಕೆಯ ಬಲವರ್ಧನೆ

ಅಕ್ಷತಾ ಜೆ. ಎ ಹಾಗೂ ಸುಮಂಗಲಾ

ಈ ಬರೆಹವು ಕರ್ನಾಟಕ ರಾಜ್ಯದ ಯಾದಗಿರಿ ಜಿಲ್ಲೆಯ ಎರಡು ಸರಕಾರಿ ಶಾಲೆಗಳಲ್ಲಿ ಆಯೋಜಿಸಿದ್ದ ಸೃಜನಶೀಲತೆಯ ಕಾರ್ಯಾಗಾರವೊಂದರ ಅನುಭವವನ್ನು ವರದಿ ಮಾಡುತ್ತದೆ. ಆ ಎರಡು ಶಾಲೆಗಳ ಮಕ್ಕಳೊಂದಿಗೆ ಕೆಲಸ ಮಾಡಿದ ಅನುಭವವನ್ನು ಈ ಲೇಖನವು ಹಂಚಿಕೊಳ್ಳುತ್ತದೆ ಮತ್ತು ಮಕ್ಕಳ ಕಲಿಕೆಯ ಬಲವರ್ಧನೆಯನ್ನು ಮಾಡಲು ಶಿಕ್ಷಕರು ವೈವಿಧ್ಯಮಯ ಬೋಧನ ಕ್ರಮಗಳನ್ನು ಪ್ರಯೋಗಿಸಬೇಕು ಎಂದು ಒತ್ತಿ ಹೇಳುತ್ತದೆ.

'ವಿದ್ಯಾರ್ಥಿಗಳು ಸಕ್ರಿಯ ಕಲಿಕಾರ್ಥಿಗಳು, ನಿಷ್ಕ್ರಿಯ ಕಲಿಕಾರ್ಥಿಗಳಲ್ಲ' ಎಂದು ನಾವು ಹೇಳುತ್ತಿರುತ್ತೇವೆ. ಆದರೆ ಗ್ರಾಮೀಣ ಭಾಗದ ಸರಕಾರಿ ಶಾಲೆಯಲ್ಲಿ ಓದುತ್ತಿರುವ ಹೆಚ್ಚಿನ ವಿದ್ಯಾರ್ಥಿಗಳು ಸಾಮಾಜಿಕ-ಆರ್ಥಿಕ ಸವಾಲುಗಳನ್ನು ಎದುರಿಸುತ್ತಿರುತ್ತಾರೆ, ಅಂಥವರು ಕಲಿಕೆಯಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುವಂತಾಗಲು ಮತ್ತು ಅವರ ಕಲಿಕೆಯ ಬಲವರ್ಧನೆಯನ್ನು ಮಾಡಲು ಶಿಕ್ಷಕರು ವೈವಿಧ್ಯಮಯ ಬೋಧನ ಕ್ರಮಗಳನ್ನು ಪ್ರಯೋಗಿಸಬೇಕು.

ನಮ್ಮ ಅಸೋಸಿಯೇಟ್ ಕಾರ್ಯಕ್ರಮದ ಅಂಗವಾಗಿ ನಾವು ಯಾದಗಿರಿ ಜಿಲ್ಲೆಯ ಎರಡು ಸರಕಾರಿ ಶಾಲೆಗಳನ್ನು ಭೇಟಿ ಮಾಡುತ್ತಿದ್ದೆವು. ಒಂದು ಅಶ್ನಾಳ್ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಇನ್ನೊಂದು ಕಂಚಗಾರಹಳ್ಳಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ. ಈ ಶಾಲೆಗಳಲ್ಲಿ 1 ರಿಂದ 8 ರವರೆಗಿನ ತರಗತಿಗಳು ನಡೆಯುತ್ತವೆ, ಹಾಗೂ ಮೊದಲನೆಯ ಶಾಲೆಯಲ್ಲಿ ಒಟ್ಟು 228 ಮಕ್ಕಳಿದ್ದರೆ ಎರಡನೆಯದರಲ್ಲಿ 202 ಮಕ್ಕಳು ಇದ್ದರು. ಪ್ರತಿ ತರಗತಿಯಲ್ಲಿಯೂ 30-40 ಮಕ್ಕಳು ಇರುತ್ತಿದ್ದರು, ಹಾಗೂ ಅವರೆಲ್ಲ ಶಾಲೆಗೆ ಹೋಗುತ್ತಿರುವ ಮೊದಲ ತಲೆಮಾರಿನವರು. ಈ ಮಕ್ಕಳ ಜ್ಞಾನದ ನೆಲೆ ದೊಡ್ಡ ಪ್ರಮಾಣದಲ್ಲೇ ಇರುತ್ತಿತ್ತು, ಹಾಗೂ ಅವರೆಲ್ಲ ತಮ್ಮ ಸುತ್ತಲ ಪರಿಸರವನ್ನು ಬಹಳ ಹತ್ತಿರದಿಂದಲೇ ಅರಿತಿದ್ದರು. ಆದರೆ ಅವರ ಕಲಿಕೆಯ ಪ್ರಕ್ರಿಯೆಗಳು ಸಾಮಾನ್ಯವಾಗಿ ತರಗತಿಕೋಣೆಯ ಚೌಕಟ್ಟಿಗೆ ಸೀಮಿತವಾಗಿರುತ್ತಿದ್ದವು ಮತ್ತು ಅವರ ನಿತ್ಯದ ಚಟುವಟಿಕೆಗಳ ಲೋಕಕ್ಕೆ ವಿಸ್ತೃತಗೊಳ್ಳುತ್ತಿರಲಿಲ್ಲ. ಇದರ ಪರಿಣಾಮವು ಅವರ ನಿರೀಕ್ಷಿತ ಕಲಿಕೆಯ ಫಲಿತಾಂಶಗಳ ಮೇಲೆ (ಅದನ್ನು ಎಷ್ಟು ಮಕ್ಕಳು ಸಾಧಿಸುತ್ತಿದ್ದರು, ಯಾವ ಪ್ರಮಾಣದಲ್ಲಿ ಎಂಬುದಕ್ಕೆ ಸಂಬಂಧಿಸಿದಂತೆ) ಆಗುತ್ತಿತ್ತು.

ಪಾಠಗಳನ್ನು ಯೋಜಿಸುವಾಗ ನಾವು ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಮೌಖಿಕ ಅಭಿವ್ಯಕ್ತಿ, ಪೋಸ್ಟರ್‌ಗಳು ಮತ್ತು ಚಿತ್ರ ಕತೆಗಳನ್ನು ಅರ್ಥಮಾಡಿಕೊಂಡು ಓದುವುದು, ಅಭಿವ್ಯಕ್ತಿಯ ಸಲುವಾಗಿ ಬರೆವಣಿಗೆ ಹಾಗೂ ದಿನನಿತ್ಯದ ಘಟನೆಗಳನ್ನು ಗಣಿತದ ಸಮಸ್ಯೆಗಳೊಂದಿಗೆ ಸಮೀಕರಿಸುವುದು ಮೊದಲಾದ ಪ್ರಕ್ರಿಯೆಗಳನ್ನೊಳಗೊಂಡ ಕಲಿಕೆಯ ಪ್ರಕ್ರಿಯೆಗಳಲ್ಲಿ ಮಕ್ಕಳು ತೊಡಗಿಕೊಳ್ಳುವುದನ್ನು ಆದ್ಯತೆಯನ್ನಾಗಿರಿಸಿ-ಕೊಂಡೆವು. ಈ ಚಟುವಟಿಕೆಗಳು ತರಗತಿಕೋಣೆಯ ಒಳಗೆ ಮತ್ತು ಹೊರಗೆ ಸಮಯ ಮತ್ತು ಸ್ಥಳಾವಕಾಶಗಳ ಒಂದು ಸಂತುಲನವನ್ನೂ ಕಾಯ್ದುಕೊಳ್ಳುತ್ತವೆ.

2023-24 ನೇ ಸಾಲಿನ ಶೈಕ್ಷಣಿಕ ವರ್ಷದ ಆರಂಭದಲ್ಲಿ ನಾವು 5 ದಿನದ ಮಕ್ಕಳ ಸೃಜನಶೀಲತೆಯ ಕಾರ್ಯಾಗಾರವೊಂದನ್ನು ಆಯೋಜಿಸಿದೆವು. ಇದು ಶಾಲೆಯ ಎಲ್ಲ ಮಕ್ಕಳನ್ನೂ ಒಳಗೊಂಡಿತ್ತು ಮತ್ತು ಶಾಲಾ ಶಿಕ್ಷಣವನ್ನು ಕುರಿತು ಮಕ್ಕಳಲ್ಲಿ ಉತ್ಸಾಹವನ್ನೂ, ಆಸಕ್ತಿಯನ್ನೂ ಉದ್ದೀಪಿಸುವ ಗುರಿಯನ್ನು ಹೊಂದಿದ ವಿವಿಧ ಚಟುವಟಿಕೆಗಳನ್ನು ಹೊಂದಿತ್ತು. ಕಾರ್ಯಾಗಾರದ ಉದ್ದೇಶಗಳು ಹೀಗಿದ್ದವು:

- ಸೃಜನಶೀಲತೆ ಮತ್ತು ವಿಮರ್ಶಾತ್ಮಕ ತೊಡಗಿ-ಕೊಳ್ಳುವಿಕೆಯು ಅಗತ್ಯವಿರುವ ಚಟುವಟಿಕೆಗಳ ಮೂಲಕ ಮಕ್ಕಳನ್ನು ತೊಡಗಿಸಿಕೊಂಡು ಅವರನ್ನು ಶಾಲೆಯತ್ತ ಮರಳಿ ಕರೆತರುವುದು. (ಈ ಸಂದರ್ಭಕ್ಕೆ ಸಂಬಂಧಿಸಿದಂತೆ ಮಕ್ಕಳು ಶಾಲೆಯ ರಜೆಗಳ ನಂತರ ಶಾಲೆಗೆ ಮರಳಲು ಹಲವು ವಾರಗಳನ್ನು ತೆಗೆದು-ಕೊಳ್ಳುತ್ತಿದ್ದರು)

- ಚಟುವಟಿಕೆಗಳಲ್ಲಿ ಪಾಲಕರು ಮತ್ತು ವಿದ್ಯಾರ್ಥಿಗಳನ್ನು ಒಳಗೊಳ್ಳುವ ಮೂಲಕ ಸಮುದಾಯದೊಂದಿಗೆ ಮಕ್ಕಳು ಇನ್ನೂ ಉತ್ತಮವಾಗಿ ಒಡನಾಡುವಂತೆ ಮಾಡುವುದು.

- ಬುನಾದಿ ಹಂತದ ಸಾಕ್ಷರತೆ ಮತ್ತು ಸಂಖ್ಯಾಜ್ಞಾನದ ಅಂಶಗಳನ್ನು ಸಮನ್ವಯೀಕರಿಸುವ ಚಟುವಟಿಕೆಗಳನ್ನು ಮಾಡುವುದು.

- ಶಿಕ್ಷಕರು ಈ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಮತ್ತು ತಮ್ಮ ಬೋಧನೆಯಲ್ಲಿ ಅವರು ಈ ಚಟುವಟಿಕೆಗಳನ್ನು ಒಳಗೊಳ್ಳುವಂತೆ ಅವರಿಗೆ ಪ್ರೋತ್ಸಾಹ ನೀಡುವುದು.

ವಿದ್ಯಾರ್ಥಿಗಳು ಮತ್ತು ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸಲು ಶಾಲಾ ಅವಧಿಗೂ ಮುನ್ನ ಸಮುದಾಯದ ಒಳಗೆ ಮಾಡಲಾದ ಕೆಲವು ಚಟುವಟಿಕೆಗಳು ಹೀಗಿದ್ದವು: ಸರಳ

ಆಟಗಳು, ಕಲಾ ಪ್ರದರ್ಶನಗಳು (ಯಕ್ಷಗಾನ, ನಾಟಕ, ಗೊಂಬೆಯಾಟ), ಪಕ್ಷಿಗಳನ್ನು ವೀಕ್ಷಿಸುವುದು, ಸ್ಥಳದಲ್ಲೇ ಸಿಗುವ ವಸ್ತುಗಳನ್ನು ಉಪಯೋಗಿಸಿ ಸರಳವಾದ ಕಲಾಕೃತಿಗಳ ರಚನೆ ಮತ್ತು ಕುಶಲ ಕೈಗಾರಿಕೆಇತ್ಯಾದಿ. ಈ ಚಟುವಟಿಕೆಗಳಲ್ಲಿ ಮಕ್ಕಳು ತೊಡಗಿಕೊಳ್ಳುವಂತೆ ಮಾಡಿದೆವು ಮತ್ತು ಇದರಲ್ಲಿ ಪಾಲಕರು ಹಾಗೂ ಯುವಕರನ್ನೂ ಪಾಲ್ಗೊಳ್ಳಲು ಆಹ್ವಾನಿಸಿದ್ದೆವು.

ಸಮುದಾಯವು ನಮ್ಮ ಕರೆಗೆ ತತ್‌ಕ್ಷಣ ಬೆಂಬಲ ನೀಡಲಿಲ್ಲ, ಅಥವಾ ಪಾಲ್ಗೊಳ್ಳಲಿಲ್ಲ, ಆದರೆ ತಮ್ಮದೇ ರೀತಿಯಲ್ಲಿ ಜನರು ಗಮನಿಸಿದ್ದರು ಮತ್ತು ಪ್ರೋತ್ಸಾಹ ನೀಡಿದ್ದರು ಎಂಬುದು ನಮ್ಮ ಗಮನಕ್ಕೆ ಬಂದಿತು. ಈ ಕಾರ್ಯಾಗಾರಕ್ಕೂ ಮೊದಲು ನಾವು ಮಕ್ಕಳೊಂದಿಗೆ ಸಮುದಾಯವನ್ನು ಭೇಟಿ ಮಾಡಿದ್ದೆವಾದರೂ ಈ ಐದು ದಿನಗಳಲ್ಲಿ ಸಂಪೂರ್ಣವಾಗಿ ಬೇರೆಯದೇ ರೀತಿಯ ತಿಳುವಳಿಕೆ ಮತ್ತು ಸಂಬಂಧವು ಅಲ್ಲಿ ರೂಪುಗೊಂಡಿತ್ತು. ವಿವಿಧ ಸಮುದಾಯಗಳ ಮನೆಯ ವ್ಯವಸ್ಥೆ, ಪೂಜಾ ಸ್ಥಳಗಳು, ವಿಶ್ರಾಂತಿ ತೆಗೆದುಕೊಳ್ಳುವ ಹಾಗೂ ಜನ ಒಂದೆಡೆ ಸೇರುವ ಜಾಗಗಳನ್ನು ಅರ್ಥ ಮಾಡಿಕೊಳ್ಳಲು ಈ ಭೇಟಿಗಳು ನೆರವಾದವು.

ಅಲ್ಲಿ ಪ್ರತಿ ದಿನವೂ ವಿವಿಧ ಚಟುವಟಿಕೆಗಳನ್ನು ಮಾಡಲು ನಾವು ಇದ್ದೆವಾದರೂ, ನಮಗೆ ಕೆಲವು ಸಾಮಾಜಿಕವಾಗಿ ಸಂಕೀರ್ಣವಾದ ಸಂಗತಿಗಳ ಪರಿಚಯವೂ ಆಯಿತು. ವಿದ್ಯಾರ್ಥಿಗಳು ಹಳ್ಳಿಯ ಕೆಲವು ಭಾಗಗಳಿಗೆ ಹೋಗಲು ನಿರಾಕರಿಸುತ್ತಿದ್ದರು ಮತ್ತು ಹಾಗೆ ಅಲ್ಲಿಗೆ ಹೋದ ಕೆಲವರಿಗೆ ಹಳ್ಳಿಯ ಸದಸ್ಯರ ಜೊತೆ ಸಂಘರ್ಷವುಂಟಾಗಿದ್ದು ಅರಿವಾಯಿತು. ಈ ರೀತಿಯ ಸನ್ನಿವೇಶಗಳಿಗೆ ವಿಶೇಷ ರೀತಿಯ ಸಂವೇದನಶೀಲತೆ / ಸ್ಪಂದನೆ ಬೇಕಾಗುತ್ತದೆ ಮತ್ತು ಅದನ್ನು ಪಾಲಕರು ಹಾಗೂ ಶಿಕ್ಷಕರ ಸೂಕ್ತ ಬೆಂಬಲದೊಂದಿಗೆ ಮಾತ್ರ ನಿರ್ವಹಿಸಲು ಸಾಧ್ಯ. ಅದಕ್ಕಿಂತ ಹೆಚ್ಚಾಗಿ, ಮಕ್ಕಳು ಹೇಗೆ ಗಮನಿಸುತ್ತಾರೆ, ಹೇಗೆ ಕಲಿಯುತ್ತಾರೆ ಮತ್ತು ತಮ್ಮ ಸುತ್ತಮುತ್ತಲ ಲೋಕದಲ್ಲಿ ಹೇಗೆ ತೊಡಗಿಕೊಳ್ಳುತ್ತಾರೆ; ತಮ್ಮ ಜ್ಞಾನ ವ್ಯವಸ್ಥೆಗಳನ್ನು ಎಷ್ಟು ಚೆನ್ನಾಗಿ ಅರಿತಿದ್ದಾರೆ; ಮತ್ತು ಇದು ಅವರ ಶಾಲಾ ಕಲಿಕೆಯಲ್ಲಿ ಸಿಗುವುದು ಅತ್ಯಲ್ಪ ಎಂಬುದರ ತಿಳುವಳಿಕೆಯನ್ನು ಈ ಅನುಭವಗಳು ನಮಗೆ ಮಾಡಿಕೊಟ್ಟವು.

ಈ ಅಂತರವನ್ನು ಕಡಿಮೆ ಮಾಡಲು ನಾವು ಮಕ್ಕಳಿಂದ ಗ್ರಾಮಸ್ಥರ ಸರಳ ಸಂದರ್ಶನಗಳನ್ನು ಮಾಡಿಸಿದೆವು. ಅದರ ಜೊತೆಗೆ ಗ್ರಾಮದ ನಕ್ಷೆಯೊಂದನ್ನು ಹಾಗೂ ಗ್ರಾಮದ್ದೇ ಆದ ಒಂದು ವಾರ್ತಾಪತ್ರಿಕೆಯನ್ನು ರೂಪಿಸಲು ಕೂಡಾ ಸಹಾಯ ಮಾಡಿದೆವು. ಕಾರ್ಯಾಗಾರದಲ್ಲಿ ಮಕ್ಕಳು ತಯಾರಿಸಿದ ಎಲ್ಲವನ್ನೂ ಕೊನೆಯ ದಿನ ಗ್ರಾಮಸ್ಥರ ಸಲುವಾಗಿ ಮಕ್ಕಳು ಆಯೋಜಿಸಿದ ಪ್ರದರ್ಶನದಲ್ಲಿ ಪ್ರಸ್ತುತಪಡಿಸಲಾಗಿತ್ತು.

## ಗ್ರಾಮದ ವಾರ್ತಾಪತ್ರಿಕೆ

ಮೊದಲಿಗೆ ವಾರ್ತಾಪತ್ರಿಕೆಯೊಂದರ ಪ್ರಯೋಜನ ಹಾಗೂ ಅದರ ವಿವಿಧ ಪ್ರಕಾರಗಳ ಕುರಿತು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಸಲಾಯಿತು. ತಮ್ಮ ಗ್ರಾಮದ್ದೇ ಆದ ಒಂದು ಸುದ್ದಿಪತ್ರಿಕೆಯನ್ನು ಹೇಗೆ ರಚಿಸಬಹುದು ಎನ್ನುವುದರ ಬಗ್ಗೆ ಆಲೋಚಿಸುವಂತೆ ಅವರಿಗೆ ಹೇಳಿದೆವು. ನಂತರ ಸುದ್ದಿಪತ್ರಿಕೆಯೊಳಗೆ ಏನೇನಿರಬೇಕು (ಸುದ್ದಿಗಳ ಪಟ್ಟಿ ಮತ್ತು ಇತರ ಒಳಾಂಶಗಳು) ಎನ್ನುವುದನ್ನು ವಿದ್ಯಾರ್ಥಿಗಳು ನಿರ್ಧರಿಸಿದರು. ಸಂಗ್ರಹಿಸಲಾದ ಸುದ್ದಿಗಳು ವೈವಿಧ್ಯಮಯ–ವಾಗಿದ್ದವು ಮತ್ತು ಆಸಕ್ತಿದಾಯಕವಾಗಿದ್ದವು. ವಿದ್ಯಾರ್ಥಿಗಳಿಗೆ ತಾವು ಸಂಗ್ರಹಿಸಿದ ಪ್ರತಿ ಸುದ್ದಿಯ ಕುರಿತು ಬಹಳ ಸಂಗತಿಗಳನ್ನು ಹೇಳುವುದಿತ್ತು, ಸಣ್ಣ ಲೇಖನಗಳನ್ನು ಬರೆಯುವ ಅಭ್ಯಾಸವು ಅವರಿಗೆ ಆಗಲಿ ಎಂದು ನಾವು ಅವರಿಗೆ ವಿವಿಧ ಸುದ್ದಿಗಳ ಕಥನಗಳನ್ನು ಬರೆಯಲು ಹೇಳಿದೆವು.

ಗ್ರಾಮದ ಸುದ್ದಿಪತ್ರಿಕೆಗಳು ಬರತೊಡಗಿದವು. ಇವುಗಳನ್ನು ವಿದ್ಯಾರ್ಥಿಗಳೇ ವಿನ್ಯಾಸಗೊಳಿಸಿದ್ದರು. ಅವುಗಳಲ್ಲಿ ವಿದ್ಯಾರ್ಥಿಗಳ ಸುತ್ತಮುತ್ತಲೂ ನಡೆಯುವ ಘಟನೆಗಳ



**ಚಿತ್ರ 1: ವಿದ್ಯಾರ್ಥಿಗಳು ಸಮುದಾಯದ ಹಿರಿಯರೊಂದಿಗೆ ತಾವು ಮಾಡಿದ ಚಟುವಟಿಕೆಗಳ ಬಗ್ಗೆ ವಿವರಣೆ ನೀಡುತ್ತಿರುವುದು.**

ವಿವರಗಳಿರುತ್ತಿದ್ದವು. ಎರಡೂ ಶಾಲೆಗಳಲ್ಲಿ 6 ಮತ್ತು 7ನೇ ತರಗತಿಯ ಮಕ್ಕಳು ಈ ಚಟುವಟಿಕೆಯ ಜವಾಬ್ದಾರಿಯನ್ನು ತೆಗೆದುಕೊಂಡಿದ್ದರು. ಪ್ರತಿ ಸಂಚಿಕೆಯಲ್ಲಿ ಲೇಖನಗಳ ಜೊತೆಗೆ ವಿದ್ಯಾರ್ಥಿಗಳೇ ರಚಿಸಿದ ಕಲೆ, ವಿದ್ಯಾರ್ಥಿಗಳಿಂದ ಸಂಗ್ರಹಿಸಲ್ಪಟ್ಟ ಸಮಸ್ಯೆಗಳು, ಪ್ರಸಿದ್ಧ ಮಾತುಗಳು, ಛಾಯಾಚಿತ್ರಗಳು ಮತ್ತು ಒಗಟುಗಳೂ ಇರುತ್ತಿದ್ದವು.

## ಸಾಕ್ಷರತೆ ಮತ್ತು ಸಂಖ್ಯಾಜ್ಞಾನದ ಕೌಶಲಗಳನ್ನು ಹಿಗ್ಗಿಸುವುದು

ವಾರ್ತಾಪತ್ರಿಕೆಗಳನ್ನು ತಯಾರಿಸುವ ಚಟುವಟಿಕೆಯು ಸಾಕ್ಷರತಾ ಪ್ರಕ್ರಿಯೆಯ ಅನೇಕ ಅಂಶಗಳ ಬಲವರ್ಧನೆಗೆ ಸಹಾಯವಾಯಿತು. ಉದಾಹರಣೆಗೆ, ಆಲೋಚನ ಪ್ರಕ್ರಿಯೆಗೆ ಸ್ಫೂರ್ತಿ ಸಿಕ್ಕಿತು; ಮಾಹಿತಿಗಳನ್ನು ಪಟ್ಟಿ ಮಾಡುವುದು, ಆದ್ಯತೆಗಳನ್ನು ಮಾಡುವುದು, ಮಾಹಿತಿಗಳನ್ನು ಸೋಸುವುದು ಮೊದಲಾದ ಕೌಶಲಗಳ ಬೆಳವಣಿಗೆ; ದತ್ತಾಂಶಗಳನ್ನು ಸಂಗ್ರಹಿಸುವುದು ಮತ್ತು ಕ್ರೋಡೀಕರಿಸುವುದು; ಅನುಭವಗಳ ಕುರಿತು ಬರೆಯುವುದು; ಘಟನೆಗಳ ಸರಣಿಯನ್ನು ವಿವರಿಸುವುದು; ಪ್ರಶ್ನೆಗಳನ್ನು ರೂಪಿಸಲು ಓದುವುದು ಮತ್ತು ಬರೆಯುವುದು; ಕಲೆ ಮತ್ತು ಕುಶಲಕಲೆಗಳಂತಹ ಬಹು ಮಾಧ್ಯಮಗಳಲ್ಲಿ ಮಾಹಿತಿಯನ್ನು ಬಿಂಬಿಸುವುದು; ಎಲ್ಲವನ್ನೂ ವಿವಿಧ ಬಗೆಯ ಓದುಗರಿಗೆ ವಿವರಿಸುವುದು, ಇತ್ಯಾದಿ.



ಚಿತ್ರ 2: ಕಂಚಗಾರಹಳ್ಳಿಯ ವಿದ್ಯಾರ್ಥಿಗಳು ರಚಿಸಿದ ವಾರ್ತಾಪತ್ರಿಕೆ

ಸಾಮಾನ್ಯವಾಗಿ ವಿದ್ಯಾರ್ಥಿಗಳು ಪಡೆಯುತ್ತಿದ್ದ ಸುದ್ದಿಗಳು ಸೀಮಿತವಾಗಿರುತ್ತಿದ್ದವು ಮತ್ತು ಅವರು ಔಪಚಾರಿಕ ಕನ್ನಡದಲ್ಲಿ ಓದಿ, ಬರೆಯಬೇಕಿತ್ತು. ಸ್ಥಳೀಯ ಮೂಲಗಳಿಂದ, ಅಂದರೆ ಗ್ರಾಮಕ್ಕೆ ಸಂಬಂಧಿಸಿದ ಮತ್ತು ಶಾಲೆಯ ಒಳಗೆ ಮತ್ತು ಹೊರಗಿನ ಸುದ್ದಿಗಳನ್ನು ಸಂಗ್ರಹಿಸಿ, ಸ್ಥಳೀಯ ಭಾಷೆಯಲ್ಲಿ ಬರೆಯಲು ಅವರಿಗೆ ಅವಕಾಶ ಸಿಕ್ಕಾಗ ಸ್ವತಂತ್ರ ಬರೆವಣಿಗೆಯ ಕೌಶಲವನ್ನು ಸಂಪಾದಿಸಲು ಅವರಿಗೆ ಒಂದು ವೇದಿಕೆ ಸಿಕ್ಕಂತಾಗಿತ್ತು. ಆಗ ಆದ್ಯತೆಗಳ ಆಧಾರದ ಮೇಲೆ ಸುದ್ದಿಗಳನ್ನು ವಿಂಗಡಿಸುವುದನ್ನು ಅವರು ಕಲಿತರು, ಮತ್ತು 'ಶಾಲೆಗೆ ಹೊಸ ಅಧ್ಯಾಪಕರ ನೇಮಕ,' ಅಥವಾ 'ಮಳೆಯ ನಿಮಿತ್ತ ಶಾಲೆಗೆ ರಜೆ' ಎಂಬಂತಹ ಸುದ್ದಿಗಳ ಪ್ರಾಮುಖ್ಯ ಅವರಿಗೆ ಅರ್ಥವಾಯಿತು. ಅವರಿಗೆ ಸಿಕ್ಕ ಸುದ್ದಿಗಳು ಅವರ ಆಸಕ್ತಿಯ ವಿಷಯಗಳೇ ಆಗಿದ್ದವು. ಆದ್ದರಿಂದ ಅವರ ಲೇಖನಗಳು ಹೆಚ್ಚಿನ ವಿವರ ಮತ್ತು ಮಾಹಿತಿಗಳಿಂದ ಕೂಡಿದ್ದವು. ಅಂತೆಯೇ ಒಬ್ಬ ವಿದ್ಯಾರ್ಥಿಯು ಹುಂಡಿ ಎಂಬ ಸ್ಥಳೀಯ ಅಡುಗೆಯ ಕುರಿತು–ಬರೆಯುವಾಗ ಅದನ್ನು ಮಾಡುವ ವಿಧಾನ ಮತ್ತು ಅದನ್ನು ವರ್ಷದಲ್ಲಿ ಒಂದೇ ಸಲ ಹಬ್ಬದ ಸಂದರ್ಭದಲ್ಲಿ ಮಾತ್ರ ಮಾಡುವುದು ಏಕೆ ಎಂಬ ವಿವರಗಳನ್ನೆಲ್ಲ ಆ ಲೇಖನದಲ್ಲಿ ಸೇರಿಸುವುದು ಅವನಿಗೆ ಸಾಧ್ಯವಾಯಿತು.

## ದತ್ತಾಂಶ ಸಂಗ್ರಹಣೆಗೆ ವಿವಿಧ ವಿಧಾನಗಳು

ಸುದ್ದಿಪತ್ರಿಕೆಗಾಗಿ ದತ್ತಾಂಶಗಳನ್ನು ಸಂಗ್ರಹಿಸುವಾಗ ವಿದ್ಯಾರ್ಥಿಗಳು ತಮ್ಮದೇ ವಿಶಿಷ್ಟ ವಿಧಾನಗಳನ್ನು ಅನುಸರಿಸಿದ್ದ ಕೆಲವು ಸಂದರ್ಭಗಳಿದ್ದವು. ಉದಾಹರಣೆಗೆ, 'ಹಳ್ಳಿಯಲ್ಲಿ ಕಟ್ಟುತ್ತಿರುವ ಹೊಸ ದೇವಸ್ಥಾನ' ಎಂಬ ವಿಷಯವನ್ನು ಆರಿಸಿಕೊಂಡಿದ್ದ ವಿದ್ಯಾರ್ಥಿಯು ವಿಶ್ವಾಸಾರ್ಹ ವಿವರಗಳನ್ನು ಪಡೆಯಲು, ಅಂದರೆ ಕಟ್ಟಡದ ನಿರ್ಮಾಣಕ್ಕೆ ಬಳಸಲಾದ ಕಲ್ಲು ಯಾವುದು, ಧನಸಹಾಯ ಹೇಗಾಯಿತು, ಆದ ಖರ್ಚುವೆಚ್ಚ ಇತ್ಯಾದಿ ವಿವರಗಳನ್ನು ವಿಶ್ವಾಸಾರ್ಹ ಮೂಲಗಳ (ಹಿರಿಯರು, ಶಿಕ್ಷಕರು, ದೇವಸ್ಥಾನದ ಟ್ರಸ್ಟ್‌ನ ಸದಸ್ಯರು) ಸಹಾಯವನ್ನು ಪಡೆದಿದ್ದ. ಮತ್ತೊಬ್ಬ ವಿದ್ಯಾರ್ಥಿಯು ಶಾಲೆಯ 'ಸಂಸತ್ತಿನ ರಚನೆ'ಯ ಬಗೆಗೆ ಆ ಪ್ರಕ್ರಿಯೆಯ ಎಲ್ಲ ಘಟನೆಗಳನ್ನು ಒಂದಾದ ಮೇಲೊಂದು ವಿವರಿಸಿ ಲೇಖನ ತಯಾರಿಸಿದ್ದ. ಶಿಕ್ಷಕರು ಸಂಸತ್ತಿನ ರಚನೆಯ ಬಗ್ಗೆ ವಿವರಿಸಿದ್ದರಿಂದ ಹಿಡಿದು ಅಭ್ಯರ್ಥಿಗಳು ಕಣಕ್ಕೆ ಇಳಿದದ್ದು, ನಂತರ ಪ್ರಚಾರ ಕಾರ್ಯ, ಮತ ಚಲಾವಣೆ, ಫಲಿತಾಂಶಗಳ ಘೋಷಣೆ ಮತ್ತು ಪ್ರಮಾಣವಚನದ ಕಾರ್ಯಕ್ರಮದವರೆಗಿನ ವಿವರಗಳನ್ನು ಕರಾರುವಕ್ಕಾಗಿ ಬರೆದಿದ್ದನ್ನು ನೋಡಿದರೆ ವಿದ್ಯಾರ್ಥಿಯ ಸ್ವತಂತ್ರ ಬರೆವಣಿಗೆಯ ಕೌಶಲವು ಎಷ್ಟು ಸುಧಾರಿಸಿದೆ ಎನ್ನುವುದನ್ನು ಅದು ತೋರಿಸುವಂತಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಮಳೆಗಾಲದಲ್ಲಿ ರಸ್ತೆಗಳಲ್ಲಿ ಉಂಟಾಗುವ ಗುಂಡಿಗಳಿಂದ ಆಗುವ ಸಮಸ್ಯೆ, ಶಾಲೆಯ ಛಾವಣಿ ಸೋರುತ್ತಿರುವಂತಹ ಸಮಕಾಲೀನ ಸಮಸ್ಯೆಗಳ ಬಗೆಗಿನ ವಿಮರ್ಶಾತ್ಮಕ ಆಲೋಚನೆಯು ಲೇಖನಗಳಲ್ಲಿ ಬಿಂಬಿತವಾಗಿತ್ತು.


## ಮಾಹಿತಿಗಳನ್ನು ವಿವಿಧ ರೀತಿಗಳಲ್ಲಿ ನಿರೂಪಿಸುವುದು

ಲೇಖನಗಳ ಜೊತೆಗೆ ವಿದ್ಯಾರ್ಥಿಗಳು ಚಿತ್ರಕಲೆ, ಚಿತ್ರಗಳಿದ್ದ ಒಗಟುಗಳು, ಪ್ರಸಿದ್ಧವ್ಯಕ್ತಿಗಳ ಉಲ್ಲೇಖಗಳು, ಪದಬಂಧ, ಅಥವಾ ಅಡುಗೆಯ ವಿಧಾನದಂತಹ ಬೇರೆ ಬೇರೆ ರೀತಿಯ ಮಾಧ್ಯಮಗಳ ಮೂಲಕವೂ ಪತ್ರಿಕೆಯ ಒಳವಿಷಯಗಳನ್ನು ನಿರೂಪಿಸಲು ಪತ್ರಿಕೆಗಳಲ್ಲಿ ಅವಕಾಶವಿತ್ತು. ಹೀಗೆ ಕಲಿಕೆಯ ಬೇರೆ ಬೇರೆ ಮಟ್ಟಗಳ ವಿದ್ಯಾರ್ಥಿಗಳೂ ಈ ಚಟುವಟಿಕೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಯಿತು. ಉದಾಹರಣೆಗೆ, ಬರೆಯಲು ಕಷ್ಟಪಡುತ್ತಿದ್ದ ವಿದ್ಯಾರ್ಥಿನಿಯೊಬ್ಬಳು ನೀರಿನ ಸಂರಕ್ಷಣೆಯನ್ನು ಚಿತ್ರವೊಂದರ ಮೂಲಕ ಅಭಿವ್ಯಕ್ತಿಸಿದ್ದಳು.

ಹೊರತಂದ ಎರಡು ಪತ್ರಿಕೆಗಳನ್ನು ಹೋಲಿಸಿದಾಗ ಮಕ್ಕಳಲ್ಲಿ ಆದ ಸುಧಾರಣೆಯು ಗಮನಕ್ಕೆ ಬಂತು. ಎರಡನೆಯದರಲ್ಲಿ ಸಂಗ್ರಹಿಸಲ್ಪಟ್ಟ ಸುದ್ದಿಗಳು ಹೆಚ್ಚಿದ್ದವು, ಬರೆಹಗಳು ಹೆಚ್ಚು ವಿವರಣಾತ್ಮಕವಾಗಿದ್ದವು. ಮೊದಲನೆಯದರಲ್ಲಿ ವಾಕ್ಯಗಳನ್ನು ಸರಿಯಾಗಿ ರಚಿಸಿರಲಿಲ್ಲ. ಎರಡನೆಯದರಲ್ಲಿ ಒಂದಾದ ನಂತರ ಒಂದರ ಹಾಗೆ ಕ್ರಮಬದ್ಧತೆ ಹಾಗೂ ಸುಸಂಬದ್ಧತೆಯ ಬಗೆಗೆ ಹೆಚ್ಚು ಲಕ್ಷ್ಯ ಕೊಡಲಾಗಿತ್ತು. ಘಟನೆಗಳನ್ನು ಹೆಚ್ಚು ದೃಶ್ಯಾತ್ಮಕವಾಗಿ ಕಟ್ಟಲಾಗಿತ್ತು ಹಾಗೂ ಭಾವಾಭಿವ್ಯಕ್ತಿ ಧಾರಾಳವಾಗಿತ್ತು.

## ಗ್ರಾಮದ ನಕ್ಷೆ

ಸಾಮಾನ್ಯವಾಗಿ ಇವಿಎಸ್ ತರಗತಿಗಳಲ್ಲಿ ನಕ್ಷೆಗಳನ್ನು ಪರಿಚಯಿಸುವುದೆಂದರೆ ಒಂದು ದೇಶ ಅಥವಾ ರಾಜ್ಯದ ನಕ್ಷೆಯನ್ನು ಪರಿಚಯಿಸುವುದಾಗಿದೆ. ಅದರಲ್ಲಿ ಸ್ಥಳಗಳನ್ನು ಯಾಂತ್ರಿಕವಾಗಿ ಗುರುತಿಸಲಾಗುತ್ತದೆ, ಮಕ್ಕಳು ಮುಖ್ಯವಾದ ನಗರಗಳು ಮತ್ತು ಸ್ಥಳಗಳನ್ನು ಉರುಹೊಡೆದು ಗುರುತಿಸುತ್ತಿರುತ್ತಾರೆ. ಆದರೆ ತಮ್ಮದೇ ಗ್ರಾಮದ ನಕ್ಷೆಯನ್ನು ರಚಿಸುವುದು ಹೆಚ್ಚು ಸೃಜನಾತ್ಮಕವಾಗಿತ್ತು. ಈ ಚಟುವಟಿಕೆಯ ಪ್ರಕ್ರಿಯೆಯು ಅವರ ಸುತ್ತಲ ಬದುಕಿಗೆ ಹೆಚ್ಚು ಸಂಬಂಧಿಸಿತ್ತು ಹಾಗೂ ನಾವು ಅದರಲ್ಲಿ ಭೌಗೋಳಿಕ ನಿರೂಪಣೆ, ಮಾರ್ಗ ನಿರ್ದೇಶನ ಮತ್ತು ಸಂಜ್ಞೆಗಳನ್ನು ಕೂಡಾ ಬಳಸಿದ್ದೆವು.



**ಚಿತ್ರ 3: ಅಶ್ನಾಶ್ ಸರಕಾರಿ ಶಾಲೆಯ ಮಕ್ಕಳು ರಚಿಸಿದ ಗ್ರಾಮ ನಕ್ಷೆ.**

## ತಾವು ಕಂಡಿದ್ದನ್ನು ನಿರೂಪಿಸುವುದು

ಮೊದಲಿಗೆ ಶಾಲೆಯ ನಕ್ಷೆಯನ್ನು ವಿನ್ಯಾಸಗೊಳಿಸಲಾಯಿತು. ಅದರಲ್ಲಿ ಧ್ವಜಸ್ತಂಭ, ವೇದಿಕೆ, ವಾಲಿಬಾಲ್ ಮೈದಾನ, ಕುಡಿಯುವ ನೀರಿನ ನಲ್ಲಿ ಇತ್ಯಾದಿ ಪ್ರಮುಖ ಜಾಗಗಳನ್ನು ಬಿಡಿಸಲಾಯಿತು. ಮಕ್ಕಳು ಅವುಗಳನ್ನು ಸರಿಯಾದ ಜಾಗಗಳಲ್ಲೇ ಬಿಡಿಸಿದರು. ಶಾಲೆಯ ಹೊರಗಿನ ಪರಿಸರದಲ್ಲಿ ಕೆರೆಗಳು, ಪೂಜಾಸ್ಥಳಗಳು (ಚರ್ಚ್, ಮಸೀದಿ, ದೇವಸ್ಥಾನ), ಬ್ಯಾಂಕ್, ಅಂಗಡಿಗಳು ಹಾಗೂ ಅಂಗನವಾಡಿ ಕೇಂದ್ರಗಳನ್ನು ಬಿಡಿಸಿದರು. ಇವುಗಳನ್ನು ಅವರು ದಿನವೂ ಶಾಲೆಗೆ ಹೋಗಿ ಬರುವಾಗ ದಾರಿಯಲ್ಲಿ ನೋಡುತ್ತಿದ್ದರು. ತಮ್ಮನ್ನು ಹಾರುತ್ತಿರುವ ಒಂದು ಹಕ್ಕಿಯ ಜಾಗದಲ್ಲಿ ಕಲ್ಪಿಸಿಕೊಂಡು ಕೆಳಗಿನ ದೃಶ್ಯಗಳನ್ನು ಗಮನಿಸಿ ಎಂದು ನಾವು ಸೂಚಿಸಿದ ಮೇಲೆ ಅವರು ಹಳ್ಳಿಯ ಪಕ್ಷಿನೋಟವೊಂದನ್ನು ಕಲ್ಪಿಸಿಕೊಂಡು ನಕ್ಷೆಯನ್ನು ಅಂತಿಮಗೊಳಿಸಿದರು.

ಭೌಗೋಳಿಕ ಪ್ರದೇಶವೊಂದನ್ನು ಕಲ್ಪಿಸಿಕೊಳ್ಳುವುದು, ಮಾರ್ಗ ಮತ್ತು ಸಂಜ್ಞೆಗಳ ಜ್ಞಾನ, ಪ್ರಮುಖ ಜಾಗಗಳಿಂದ ಇರುವ ದೂರಗಳನ್ನು ಮನಸ್ಸಿನಲ್ಲೇ ಕಲ್ಪಿಸಿಕೊಳ್ಳುವುದು, ಜಾಗಗಳನ್ನು ಗುರುತಿಸುವುದರ ಜೊತೆಗೆ ಇಡೀ ಹಳ್ಳಿಯನ್ನು ಒಂದು ನಕ್ಷೆಯ ಒಳಗೆ ಕೂರಿಸುವ ಕೌಶಲಗಳಿಗೆ ಈ ಚಟುವಟಿಕೆಯು ಬಲವರ್ಧನೆಯನ್ನು ಒದಗಿಸಿತ್ತು. ಗಣಿತದ ಕಲಿಕೆಯಲ್ಲಿ 'ಅಂದಾಜು ಹಾಕುವ' ಕೌಶಲವೂ ಇಲ್ಲಿ ಬಳಕೆಗೆ ಬಂದಿತ್ತು. ಒಟ್ಟಿನಲ್ಲಿ ನಮ್ಮಿಂದ ಕನಿಷ್ಠ ಸಹಾಯವನ್ನು ಪಡೆದು ಗ್ರಾಮದ ಒಂದು ಅಚ್ಚುಕಟ್ಟಾದ ನಕ್ಷೆಯನ್ನು ಮಕ್ಕಳು ತಯಾರಿಸಿದ್ದರು.

## ನಿರೂಪಣೆಯಲ್ಲಿ ಕಲಾತ್ಮಕತೆ

ನಕ್ಷೆಯಲ್ಲಿ ನಿರೂಪಿಸುವಾಗ ಮಕ್ಕಳು ಕಟ್ಟಡಗಳು ಮತ್ತು ಇತರ ನಿರ್ಮಿತಿಗಳಿಗೆ ಬಳಸಿದ ಬಣ್ಣಗಳು, ಹಾಗೂ ಅಂಗಡಿಗಳು, ಪೂಜಾಸ್ಥಳಗಳು ಮತ್ತು ಜಮೀನು, ಬಯಲು, ಮರಗಿಡಗಳು ಇತ್ಯಾದಿಗಳಿಗೆ ನೀಡಿದ ವಿಶೇಷ ಸಂಜ್ಞೆಗಳು ವಿಶೇಷವಾಗಿದ್ದವು. ಸಾಮಾನ್ಯವಾಗಿ ಜನರು ನಕ್ಷೆಯನ್ನು ನೋಡಿ ಜಾಗಗಳನ್ನು ಊಹಿಸುತ್ತಾರೆ, ಆದರೆ ಇಲ್ಲಿ ಮಕ್ಕಳು ತಾವೇ ಕಲ್ಪಿಸಿಕೊಂಡು ನಕ್ಷೆಯೊಳಗಿನ ಅಂಶಗಳನ್ನು ರಚಿಸಿದ್ದರು. ಹೀಗೆ ಅವರ ಕಲಿಕೆಯು ಅನುಭವದ ಮೂಲಕ ಆದ 'ಅನುಗಮನ' ಮಾದರಿಯ (inductive) ಕಲಿಕೆಯಾಗಿತ್ತು.

ವಿದ್ಯಾರ್ಥಿಗಳ ಕಲಾ ಚಟುವಟಿಕೆಗಳ ಒಂದು ಪ್ರದರ್ಶನವನ್ನು ನಾವು ಯೋಜಿಸಿದಾಗ ವಿದ್ಯಾರ್ಥಿಗಳು ಸ್ವತಃ ತಾವೇ ಮುಂದೆ ಬಂದು ಸಮುದಾಯದ ಪ್ರತಿ ಮನೆಯಿಂದ ಜನರನ್ನು ಆಹ್ವಾನಿಸಿ ಒಗ್ಗೂಡಿಸಿದ್ದರು. ಎರಡೂ ಶಾಲೆಗಳು ಸೇರಿ ಸುಮಾರು 100 ಸದಸ್ಯರು ಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು. ಕಂಚಗಾರಹಳ್ಳಿ ಶಾಲೆಯ ಪ್ರದರ್ಶನದಲ್ಲಿ ಶಿಕ್ಷಣ ವಿಭಾಗದ ಆಡಳಿತ ವರ್ಗವೂ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಅಶ್ನಾಳ್ ಶಾಲೆಯಲ್ಲಿ ಸಮುದಾಯದ ಜಾಗದಲ್ಲಿಯೇ ಪ್ರದರ್ಶನವಾಗಿತ್ತು ಮತ್ತು ಸಮುದಾಯದ ಜನರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ವಿದ್ಯಾರ್ಥಿಗಳು ತಾವೇ ತಯಾರಿಸಿದ ಗ್ರಾಮದ ನಕ್ಷೆ, ಗ್ರಾಮದ ಪತ್ರಿಕೆ ಮುಂತಾದವುಗಳನ್ನು ನೋಡಲು ಬಂದವರಲ್ಲಿ ಯಾರಿಗೆ ಓದಲು ಬರುತ್ತದೆ, ಯಾರಿಗೆ ಇಲ್ಲ ಎಂಬ ಅರಿವನ್ನು ಇಟ್ಟುಕೊಂಡು ಗ್ರಾಮಸ್ಥರಿಗೆ, ಪಾಲಕರಿಗೆ, ಶಿಕ್ಷಣ ವಿಭಾಗದ ಜನರಿಗೆ, ಕಾಲೇಜು ವಿದ್ಯಾರ್ಥಿಗಳಿಗೆ – ಹೀಗೆ ವಿವಿಧ ರೀತಿಯ ನೋಡುಗರಿಗೆ ವಿವರಿಸಿದರು. ಹೀಗೆ ವಿವರಿಸುವಾಗ ಅವರು ತಾವು ವಿವರಿಸುವ ಅಂಶಗಳನ್ನು ಪ್ರಜ್ಞಾಪೂರ್ವಕವಾಗಿ ಆಯ್ದು ವಿವರಿಸುತ್ತಿದ್ದುದು ನಮ್ಮ ಗಮನಕ್ಕೆ ಬಂತು. ಉದಾಹರಣೆಗೆ, ಬಂದವರಿಗೆ ಸಂಬಂಧಿಸಿದ ರಸ್ತೆಗಳು, ಮನೆಗಳನ್ನು ತೋರಿಸುವುದು, ತಾವು ಅದನ್ನು ನಕ್ಷೆಯಲ್ಲಿ ಗುರುತಿಸಿದ ಬಗೆ ಮತ್ತು ಅದಕ್ಕೆ ಸಂಬಂಧಪಟ್ಟ ಘಟನೆಗಳನ್ನು ನೆನಪಿಸುವುದು ಇತ್ಯಾದಿ. ಬಂದ ಸಮುದಾಯದವರು ಹಾಗೂ ಶಿಕ್ಷಣ ವಿಭಾಗದ ಜನರು ಪತ್ರಿಕೆಯ ಎರಡನೇ ಸಂಚಿಕೆಯನ್ನು ತನ್ನಿ ಎಂದು ಹುರಿದುಂಬಿಸಿದ್ದು ಈ ಪ್ರದರ್ಶನದ ವಿಶೇಷ ಅನುಭವವಾಗಿತ್ತು.

ಯಾವುದೇ ಬಗೆಯ ಬೋಧನೆಯ ಕ್ರಮವೂ ಒಂದೊಂದು ರೀತಿಯ ಕಲಿಕೆಯ ಮಾರ್ಗವಾಗಿದೆ ಎನ್ನುವುದನ್ನು ನಾವು ಬಲ್ಲೆವು. ಮಕ್ಕಳು ಕಂಠಪಾಠದ ಮೂಲಕ ಕಲಿಯುತ್ತಾರೆ ಮತ್ತು ಕಲಿಕೆಯ ಬಲವರ್ಧನೆಗೆ ಅದೊಂದೇ ಮಾರ್ಗ ಎನ್ನುವುದು ನಾವು ಸಾಮಾನ್ಯವಾಗಿ ಇವತ್ತಿನ ಶೈಕ್ಷಣಿಕ ಸನ್ನಿವೇಶದಲ್ಲಿ ಕಾಣುವ ದೃಶ್ಯವಾಗಿದೆ. ತರಗತಿಕೋಣೆಯಲ್ಲಿ ಮಾಡುವ ಚಟುವಟಿಕೆಗಳು ಹೆಚ್ಚಿನದಾಗಿ ಪರಿಕಲ್ಪನೆಗಳ ಪರಿಚಯಕ್ಕಾಗಿವೆ. ಚಟುವಟಿಕೆಗಳನ್ನು ಆಧರಿಸಿದ ಕಲಿಕೆಯಂತೂ ಅಪರೂಪವೆನ್ನ–ಬಹುದು. ಹಾಗೂ ಕಲಿಕೆಯ ಬಲವರ್ಧನೆಗೆ ಉಪಯುಕ್ತ–ವಾಗಲೆಂದು ವಿವಿಧ ಪ್ರಕಾರದ ಬಲವರ್ಧನೆಗಳನ್ನಂತೂ ಬಳಸುವುದೇ ಇಲ್ಲ. ಕೊನೆಗೂ ಮಕ್ಕಳಿಗೆ ವರ್ಷದ ಕೊನೆಯಲ್ಲಿ ಬಲವರ್ಧನೆ ಸಿಕ್ಕರೆ ಸಾಕು, ಅಲ್ಲಿ ಅವರು ಉತ್ತರಗಳನ್ನು ಬರೆಯುವಾಗ ಮತ್ತು ಸಮಸ್ಯೆಗಳನ್ನು ಬಿಡಿಸುವಾಗ ಅದರ ಅಗತ್ಯವಿರುತ್ತದೆ ಎಂಬ ನಂಬಿಕೆಯೇ ಅದಕ್ಕೆ ಕಾರಣವಾಗಿದೆ.



ಚಿತ್ರ 4: ನಕ್ಷೆಯ ಮೇಲೆ ಜಾಗಗಳನ್ನು ಗುರುತಿಸುತ್ತಿರುವ ಗ್ರಾಮಸ್ಥರು.

ಸಮಗ್ರ ಸುಧಾರಣೆಯನ್ನು ತರುವ ಕಲಿಕೆಯ ಪ್ರತಿ ಅಂಶವೂ ಮುಖ್ಯ ಎನ್ನುವುದನ್ನು ಈ ಉಪಕ್ರಮದ ಮೂಲಕ ನಾವು ಗಮನಿಸಿದೆವು. ಉದಾಹರಣೆಗೆ, ಲೇಖನದ ತಯಾರಿಯಲ್ಲಿ ಉತ್ತಮ ಪ್ರಶ್ನೆಗಳನ್ನು ಕೇಳುವುದು, ಸೃಜನಾತ್ಮಕ ಬರೆವಣಿಗೆಯ ಕೆಲಸಗಳನ್ನು ನೀಡುವುದು, ಸೂಚನೆ ಮತ್ತು ಸಲಹೆಗಳನ್ನು ನೀಡುವ ಮೂಲಕ ಮಕ್ಕಳ ಬರೆವಣಿಗೆಗೆ ಹಂದರವನ್ನು ನಿರ್ಮಿಸುವುದು, ಬರೆಯುವುದನ್ನು ಯೋಜಿಸುವುದು ಮತ್ತು ಬರೆದದ್ದನ್ನು ಮರಳ ಪರೀಕ್ಷಿಸುವುದು, ಕೊನೆಗೆ ಬರೆದದ್ದರ ಪ್ರಸ್ತುತಿ ಇವೆಲ್ಲವೂ ತಮ್ಮದೇ ರೀತಿಯಲ್ಲಿ ಭಾಷಾ ಕಲಿಕೆಗೆ ಸಹಾಯ ಮಾಡಿದವು. ತಮ್ಮ ಗ್ರಾಮದ ಹಬ್ಬದ ಕುರಿತು ಬರೆದುಕೊಂಡು ಬನ್ನಿ ಎಂದೇನಾದರೂ ನಾವು ಮನೆಗೆಲಸ ಕೊಟ್ಟಿದ್ದರೆ ಆಗ ಅವರ ಲೇಖನಗಳು ಹೀಗಿರುತ್ತಿರಲಿಲ್ಲ, ಮತ್ತು ಅದನ್ನು ಬರೆದುಕೊಂಡು ಬರುವವರ ಸಂಖ್ಯೆಯೂ ಕಡಿಮೆ ಇರುತ್ತಿತ್ತು. ನಾವು ಇಲ್ಲಿ ಅನುಸರಿಸಿದ ವಿಧಾನದ ಲಾಭವೇನೆಂದರೆ, ಬಹುವಿಧದ ಅವಕಾಶಗಳು ಮತ್ತು ಅನುಭವ ಸಿಗುತ್ತದೆ, ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ ಹೆಚ್ಚಾಗಲು ಸಹಾಯವಾಗುತ್ತದೆ, ಚಟುವಟಿಕೆಯಲ್ಲಿ ಇನ್ನೂ ಉತ್ತಮವಾಗಿ ತೊಡಗಿಕೊಳ್ಳಲು ಅನುಕೂಲವಾಗುತ್ತದೆ, ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯು ಇರುತ್ತದೆ. ಈ ಪ್ರಕ್ರಿಯೆಯನ್ನು ಪುನರವಲೋಕಿಸಿದಾಗ ನಮಗೆ ಅನ್ನಿಸಿದ್ದೇನೆಂದರೆ, ಬಹುವಿಧದ ಬೋಧನ ಕ್ರಮಗಳನ್ನು ಹೊಂದಿದ ಸೂಕ್ತ ವೇದಿಕೆಯನ್ನು ಒದಗಿಸಿದರೆ ಸೀಮಿತ ಸಮಯದಲ್ಲಿಯೂ ಪರಿಣಾಮಕಾರಿಯಾದ ಕಲಿಕೆಯ ಪಲ್ಲಟವು ಆಗುತ್ತದೆ ಎನ್ನುವುದು ನಮ್ಮ ಅರಿವಿಗೆ ಬಂತು.



**ಚಿತ್ರ 5: ಕಂಚಗಾರಹಳ್ಳಿಯಲ್ಲಿ ನಡೆದ ಪ್ರದರ್ಶನದಲ್ಲಿ ವಿದ್ಯಾರ್ಥಿಗಳು ಶಿಕ್ಷಣ ವಿಭಾಗದ ಅಧಿಕಾರಿಗಳಿಗೆ ಗ್ರಾಮದ ನಕ್ಷೆಯನ್ನು ತೋರಿಸುತ್ತಿರುವುದು.**

[i] ಈ ಕಾರ್ಯಕ್ರಮದ ಅಂಗವಾಗಿ ಅಜೀಮ್ ಪ್ರೇಮ್‌ಜಿ ಫೌಂಡೇಷನ್‌ನ ಅಸೋಸಿಯೇಟ್ಸ್‌ಗಳು ಸರಕಾರಿ ಶಾಲೆಯೊಂದರಲ್ಲಿ ಒಂದು ವರ್ಷ ಇದ್ದು, ತರಗತಿಯ ಪ್ರಕ್ರಿಯೆಗಳನ್ನು ಗಮನಿಸುತ್ತಾ ತರಗತಿಯೊಂದಿಗೆ ಹೇಗೆ ತೊಡಗಿಕೊಳ್ಳುವುದು ಎನ್ನುವುದನ್ನು ಕಲಿಯುತ್ತಾರೆ. ಶಾಲಾ ಪ್ರಕ್ರಿಯೆಗಳನ್ನು ಅರ್ಥ ಮಾಡಿಕೊಳ್ಳುತ್ತಾ, ಮಕ್ಕಳ ಕಲಿಕೆಯಲ್ಲಿ ಸಹಾಯ ಮಾಡುತ್ತಾ, ಸರಕಾರಿ ಶಾಲೆಗಳು ಹಾಗೂ ಸರಕಾರಿ ಶಿಕ್ಷಣ ವ್ಯವಸ್ಥೆಯನ್ನು ಒಂದು ಸಮಗ್ರ ದೃಷ್ಟಿಕೋನದಲ್ಲಿ ಅರ್ಥಮಾಡಿಕೊಳ್ಳುವ ಬಗೆಯನ್ನು ರೂಪಿಸಲು ತಮ್ಮ ಕೊಡುಗೆಯನ್ನು ನೀಡುತ್ತಾರೆ.

---




**ಅಕ್ಷತಾ ಜೆ. ಎ** ಅವರು ಇವರು ಕರ್ನಾಟಕದ ಯಾದಗಿರಿ ಜಿಲ್ಲೆಯಲ್ಲಿರುವ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಎಸೋಸಿಯೇಟ್ ರಿಸೋರ್ಸ್ ಪರ್ಸನ್ ಆಗಿದ್ದಾರೆ. ಇವರು ಜೈವಿಕತಂತ್ರಜ್ಞಾನದಲ್ಲಿ ಸ್ನಾತಕ ಪದವಿಯನ್ನು ಪಡೆದಿದ್ದಾರೆ. ಇವರಿಗೆ ನೃತ್ಯ ಮತ್ತು ಗಾಯನದಲ್ಲಿ ಆಸಕ್ತಿ ಇದ್ದು ಕಳೆದ ಆರು ವರ್ಷಗಳಿಂದ ಯಕ್ಷಗಾನವನ್ನು ಮಾಡುತ್ತಾ ಬಂದಿದ್ದಾರೆ. ಅವರನ್ನು akshatha.ja@azimpremjifoundation.org ಮೂಲಕ ಸಂಪರ್ಕಿಸಬಹುದು.



**ಸುಮಂಗಲಾ** ಅವರು ಕರ್ನಾಟಕದ ಯಾದಗಿರಿ ಜಿಲ್ಲೆಯಲ್ಲಿರುವ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಎಸೋಸಿಯೇಟ್ ರಿಸೋರ್ಸ್ ಪರ್ಸನ್ ಆಗಿದ್ದಾರೆ. ಇವರು ಪ್ರಾಣಿಶಾಸ್ತ್ರದಲ್ಲಿ ಸ್ನಾತಕ ಪದವಿಯನ್ನು ಪಡೆದಿದ್ದಾರೆ. ಇವರಿಗೆ ಓದುವುದು, ಟ್ರೆಕ್ಕಿಂಗ್, ಹೊಸ ಹೊಸ ಜಾಗಗಳು ಮತ್ತು ಸಂಸ್ಕೃತಿಗಳನ್ನು ಅನ್ವೇಷಿಸುವ ಹವ್ಯಾಸ ಇದೆ. ಇವರನ್ನು sumangala.b@azimpremjifoundation.org ಮೂಲಕ ಸಂಪರ್ಕಿಸಬಹುದು.



ಅನುವಾದ: **ಪ್ರಜ್ಞಾ ಎಲ್ ಎಸ್** | ಪರಿಶೀಲನೆ: **ಮೆಲ್ವಿನ್ ಮೆಂಡೊನ್ಸಾ**